

# ಹೂವಿನಂತಹ ದೇಹಕ್ಕೆ ಮುಳ್ಳಿನ ಹಿಂಸೆ

ಮೊದಲ ಜೀವಕೋಶವೇ ನಮ್ಮ ಜೀವಾತ್ಮ ಭವಿಷ್ಯದ ಲಿಪಿಕರ್ತ. ಜೀವ ಗರ್ಭಗಟ್ಟುವ ಹೊತ್ತಿನಲ್ಲಿ ಆವಿರ್ಭವಿಸಿದ ಆ ಜೀವಕೋಶ ಸಹಜವಾಗಿ ಅಂಗಾಂಶವಾಗಿ, ಅಂಗಾಂಶ ಅಂಗವಾಗಿ, ದೇಹವಾಗಿ ರೂಪಾಂತರಗೊಳ್ಳುವ ಕ್ರಿಯೆ ಸೋಜಿಗ ಹುಟ್ಟಿಸುತ್ತದೆ. ಆದರೆ ಆ ಜೀವಿಯ ಕ್ರಿಯೆ ಮತ್ತು ಪೋಷಣೆಯನ್ನು ನಿಸರ್ಗವೇ ನಿರ್ವಹಿಸುತ್ತದೆ.

**■ ಎಸ್. ಚಕ್ರಪಾಣಿ**

ನಮ್ಮ ದೇಹದ ಕೂದಲು, ಉಗುರುಗಳು, ರಕ್ತ, ಮೂಳೆ ಮಜ್ಜೆಗಳೆಲ್ಲ ಜೀವಕೋಶಗಳ ಸಮೂಹಗಳಿಂದ ರೂಪಿತವಾಗಿದೆ. ಅವು ದೇಹದ ಬಿಲ್ಡಿಂಗ್ ಬ್ಲಾಕ್‌ಗಳು. ನಾವು ಭವಿಷ್ಯದಲ್ಲಿ ಹೇಗೆ ಇರುತ್ತೇವೆ ಎಂಬ ವಿವರವನ್ನು ಅವು ಹೊಂದಿರುತ್ತವೆ. ಈ ಮಾಹಿತಿಯು ನಮ್ಮ ಜೀವನ ಪ್ರಾರಂಭವಾದಾಗ ಹುಟ್ಟಿದ ಮೊಟ್ಟಮೊದಲ ಕೋಶದಲ್ಲಿಯೂ ಅಡಕವಾಗಿರುತ್ತದೆ. ಮೊದಲ ದಿನ ಹುಟ್ಟಿದ ಜೀವಕೋಶದಿಂದ ನಿತ್ಯವೂ ಹುಟ್ಟುವ ಎಲ್ಲ ಜೀವಕೋಶಗಳಲ್ಲೂ ಅದರ ಗುಣಲಕ್ಷಣ ಪುನರಾವರ್ತನೆಯಾಗುತ್ತದೆ.

ಜೀವಕೋಶಗಳ ಗುಂಪನ್ನು ಅಂಗಾಂಶ ಎಂದೂ, ಅಂಗಾಂಶಗಳ ಗುಂಪನ್ನು ಸ್ನಾಯು ಎಂದೂ, ಸ್ನಾಯುಗಳ ಗುಂಪನ್ನು ಅಂಗ, ಅಂಗಗಳು ಸೇರಿ ಪೂರ್ಣ ದೇಹದ ರೂಪು ಕಾಣುತ್ತೇವೆ. ಕಣ್ಣಿಗೆ ಕಾಣದಷ್ಟು ಸೂಕ್ಷ್ಮವಾಗಿರುವ ಕೋಶಗಳಲ್ಲಿಯೇ ಶಕ್ತಿ, ಬೆಳವಣಿಗೆ ಮತ್ತು ಜೀವನದ ನಿರ್ವಹಣೆ ಎಲ್ಲ ಕ್ರಿಯೆ–ಪ್ರತಿಕ್ರಿಯೆಗಳು ನಡೆಯುತ್ತವೆ.

ವಾಯುಮಂಡಲದಲ್ಲಿ ಆಮ್ಲಜನಕ, ಇಂಗಾಲದ ಡೈಆಕ್ಸೈಡ್, ಹೀಲಿಯಂ, ಮಿಥೇನ್, ತೇವಾಂಶ ಸೇರಿದಂತೆ ಬೇರೆ ಬೇರೆ ಸೂಕ್ಷ್ಮ ಜೀವ ಜಗತ್ತನ್ನು ಅದು ಒಳಗೊಂಡಿದೆ. ಆದರೆ, ನಾವು ಉಸಿರನ್ನು ಎಳೆದುಕೊಂಡಾಗ ನಮ್ಮ ಶ್ವಾಸಕೋಶದಲ್ಲಿ ಕೆಂಪು ರಕ್ತಕಣಗಳು ಆಮ್ಲಜನಕವನ್ನು ಮಾತ್ರ ಆಯ್ದು ಉಳಿದ ಮೂಲವನ್ನು ತಿರಸ್ಕರಿಸುತ್ತವೆ. ನಂತರ ಅವು ದೇಹದ ಎಲ್ಲ ಕೋಶಗಳಿಗೆ ಆಮ್ಲಜನಕವನ್ನು ಸಾಗಿಸುತ್ತವೆ. ಅಂದರೆ ನಿಸರ್ಗ ಸಕಲ ಜೀವಜಗತ್ತಿನ ಗತಿ–ಸ್ಥಿತಿಗೆ ಬೇಕಾಗುವ ಮೂಲ ಅಗತ್ಯವನ್ನು ಪೂರೈಸುತ್ತದೆ.

ಹೀಗಿದ್ದೂ ಫ್ಯಾಷನ್‌ಯುಗ ಈ ಸತ್ಯವನ್ನು ಮರೆತುಬಿಟ್ಟಿದೆ. ಕೃಷಿ ಉತ್ಪನ್ನಗಳೆಲ್ಲಾ ಕಾರ್ಖಾನೆ ತಲುಪಿ ಅಲ್ಲಿಂದ ಬಳಕೆದಾರನಿಗೆ ತಲುಪುವ ಹೊತ್ತಿಗೆ ನೈಜತೆ ಮಾಸಿ ಕೃತಕತೆ ರಾರಾಜಿಸುತ್ತಿರುತ್ತದೆ. ಕಾರ್ಖಾನೆ ಸೇರಿದ ಕೃಷಿ ಕಚ್ಚಾ ಉತ್ಪನ್ನದಿಂದ ಪೋಷಕಾಂಶಗಳನ್ನು ಬೇರ್ಪಡಿಸಿ, ಶುದ್ಧೀಕರಣ ಮಾಡಿ, ಬಣ್ಣ ತೆಗೆದು ಬ್ಲೀಚಿಂಗ್ ಗ್ರಾಹಕರನ್ನು ತಲುಪುವ ತನಕ ಗೋದಾಮುಗಳಲ್ಲಿ ಅವುಗಳ ಮೇಲೆ ಬ್ಯಾಕ್ಟೀರಿಯಾದ ದಾಳಿಯನ್ನು ತಡೆದು ಸುರಕ್ಷತೆ ಒದಗಿಸಲು ಅಪಾರ ರಾಸಾಯನಿಕಗಳನ್ನು ನಿಯೋಜಿಸಲಾಗುತ್ತದೆ.

ಈ ಆಹಾರ ಪದಾರ್ಥಗಳು ಅಸ್ತಮಾ, ಕ್ಯಾನ್ಸರ್, ಮಧುಮೇಹ, ಸ್ಥೂಲಕಾಯ, ಹೃದ್ರೋಗ, ಥೈರಾಯ್ಡ್ ಸೇರಿದಂತೆ ಅಸಂಖ್ಯಾತ ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗುತ್ತಿವೆ. ಆಧುನಿಕ ವೈದ್ಯಕೀಯ ವಿಜ್ಞಾನದಲ್ಲಿ ಪ್ರಗತಿದಾಯಕ ಆವಿಷ್ಕಾರಗಳ ಬೆನ್ನಿಗೆ ಹೊಸ ಹೊಸ ರೋಗಗಳೂ ಹುಟ್ಟಿಕೊಳ್ಳುತ್ತಿವೆ. ನಾವು ಸೇವಿಸುವ ಉಪ್ಪು, ಹಿಟ್ಟು, ಅಡುಗೆ ಎಣ್ಣೆಗಳು, ಸಕ್ಕರೆ, ಮೈದಾ, ತಂಪು ಪಾನೀಯಗಳು, ಸಂಸ್ಕರಿತ ಆಹಾರ ಪೊಟ್ಟಣಗಳ ಒಳಗಿನಿಂದ ರೋಗಕಾರಿ ವಿಷ ಯಾವುದೋ ರೂಪದಲ್ಲಿ ದೇಹ ಎಂಬ ಉಗ್ರಾಣವನ್ನು ಸೇರಿ ರೋಗವನ್ನು ಹಬ್ಬಿಸುತ್ತದೆ.

### ವಿಷಗಳ ಕಥೆ

ಸೂಪರ್ ಮಾರ್ಕೆಟ್ ಸಂಸ್ಕೃತಿಯೊಂದಿಗೆ ವಿಷದ ಬಿತ್ತನೆ ಪ್ರಾರಂಭವಾಯಿತು. ನಮ್ಮ ಟೂತ್ ಪೇಸ್ಟ್ ಕ್ಯಾಲ್ಸಿಯಂ ಮತ್ತು ಖನಿಜಗಳನ್ನು ಒಳಗೊಂಡಿದೆ, ಶಾಂಪೂ ಪ್ರೊಟೀನ್‌ಗಳನ್ನು ಹೊಂದಿರುತ್ತದೆ, ಸಾಬೂನು ಬಾದಾಮಿ ಮತ್ತು ಜೇನನ್ನು ಹೊಂದಿರುತ್ತದೆ ಎಂದು ಜಾಹೀರಾತು ಮಾರುಕಟ್ಟೆ ಹೇಳುತ್ತದೆ. ಆದರೆ, ಅದು ಅಪ್ಪಿತಪ್ಪಿಯೂ ಅವರ ಆಹಾರ ಪದಾರ್ಥಗಳಲ್ಲಿ ಕೀಟನಾಶಕಗಳು ಮತ್ತು ವಿಷಕಾರಿ ರಾಸಾಯನಿಕಗಳು ಸೇರಿವೆ ಎಂದು ಹೇಳುವುದಿಲ್ಲ!

ನಾವು ನೆನಪಿನಲ್ಲಿಟ್ಟುಕೊಳ್ಳಬೇಕಾದ ಇನ್ನೊಂದು ಪ್ರಮುಖ ಅಂಶ ಏನೆಂದರೆ, ಇಂದು ಮಾರಾಟವಾಗುವ ಉತ್ಪನ್ನಗಳಲ್ಲಿರುವ ಪೋಷಕಾಂಶಗಳಿಂದ ನಮಗೆ ಹೆಚ್ಚಿನ ಉಪಯೋಗವಿಲ್ಲ. ನಮ್ಮ ದೇಹದ ಜೀವಕೋಶಗಳು ಅವುಗಳನ್ನು ಸ್ವೀಕರಿಸುವುದಿಲ್ಲ. ಪ್ರಕೃತಿಯೇ ವಿನ್ಯಾಸ ಮಾಡಿರುವ ಪ್ರಕಾರ ಎಲ್ಲ ಪೋಷಕಾಂಶಗಳು ವಿವಿಧ ಕಿಣ್ವಗಳು, ಸಹಕಿಣ್ವಗಳು, ವಿರೋಧಿ ಆಕ್ಸಿಡೆಂಟ್ಸ್‌ಗಳು ಅನೇಕ ಜ್ಞಾತ ಮತ್ತು ಅಜ್ಞಾತ ಅಂಶಗಳೊಂದಿಗೆ ಬೆಸೆದುಕೊಂಡಿರುವೆ. ಇಂದಿನ ಬುದ್ಧಿವಂತ ಕೈಗಾರಿಕಾ ಸಮಾಜ ನೈಸರ್ಗಿಕ ಪಾಲುದಾರರಿಂದ ಪೋಷಕಾಂಶಗಳನ್ನು ಬೇರ್ಪಡಿಸಿ ದುಬಾರಿ ಬೆಲೆಗೆ ಅವುಗಳನ್ನು ಸರಬರಾಜು ಮಾಡುತ್ತಿದೆ.

ಪ್ರಕೃತಿ ಅದ್ಭುತ ಕ್ರಿಯಾ ರಚನಾಬಂಧವನ್ನು ಹೊಂದಿದೆ. ಅದಕ್ಕೆ ಸಕಲ ಜೀವರಾಶಿಗಳನ್ನೂ ಪೊರೆಯುವ ಶಕ್ತಿ ಇದೆ. ಮೊದಲಿನಿಂದಲೂ ನಾವು ಪ್ರಕೃತಿಗೆ ಗೌರವವನ್ನು ನೀಡುವ ಮೂಲಕ ಆರೋಗ್ಯಕರ ಮತ್ತು ಗುಣಮಟ್ಟದ ಜೀವನವನ್ನು ಜೀವಿಸಿದ್ದೇವೆ. ಆದರೆ ಈಗ ಪಾಶ್ಚಿಮಾತ್ಯ ಜೀವನ ಶೈಲಿಯ ಪ್ರೇಮದಿಂದಾಗಿ ನಾವು ನಮ್ಮನ್ನು ನಾಶ ಮಾಡಿಕೊಳ್ಳುತ್ತಿದ್ದೇವೆ. ಹಾನಿಕಾರಕ ಪರಿಣಾಮಗಳನ್ನು ಮರೆತು ನಾವು ಅವಲಂಬಿಸಿರುವ ಆಧುನಿಕ ಕೈಗಾರೀಕರಣವು ಪರಿಸರಕ್ಕೆ ಹೆಚ್ಚಿನ ಹಾನಿ ಉಂಟುಮಾಡುವ ಮೂಲಕ ಜಾಗತಿಕ ತಾಪಮಾನ ಏರಿಕೆಗೆ ಕಾರಣವಾಗಿದೆ. ಅದೇ ರೀತಿಯಲ್ಲಿ, ಇವು ನಮ್ಮ ಆರೋಗ್ಯವನ್ನು ಹಾಳುಮಾಡುತ್ತವೆ. ಆದ್ದರಿಂದ, ವಿಷಯುಕ್ತ ಆಹಾರ ಮತ್ತು ಸಂಸ್ಕರಿತ ಪಾನೀಯಗಳೆಂದು ಕರೆಯಲ್ಪಡುವ ರಾಕ್ಷಸರಿಂದ ನಮ್ಮನ್ನು ನಾವು ರಕ್ಷಿಸಿಕೊಳ್ಳಬೇಕು. ■